ಹೇಳುತ್ತಾ ಇರುವುದು. ಬಹುಶಃ ಅಲ್ಲಿರತಕ್ಕಂಥ ಪರಿಸ್ಥಿತಿಯ ಬಗ್ಗೆ ಮುಖ್ಯಮಂತ್ರಿಗಳಿಗೂ ಕೂಡ ತಿಳಿಸಿಲ್ಲ ಎಂದು ಕಾಣುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿ:– ಕ್ರಾಪ್ ಕಾಂಪನ್‌ಸೇಶನ್ ಎನ್ನುವ ಸ್ಕೀಮ್ ಕೇಂದ್ರದಲ್ಲಿಯೂ ಇಲ್ಲ, ನಮ್ಮಲ್ಲಿಯೂ ಇಲ್ಲ. ನಮಗೆ ಕೊಡತಕ್ಕಂಥಾದ್ದು ಇನ್‌ಪುಟ್ ಸಬ್ಸಿಡಿ ಮಾತ್ರ. ಇದು ಒಂದು ಹೆಕ್ಟೇರ್‌ಗೆ 500 ರೂ.ಗಳು ಎಂದು ಮಾಡಿದ್ದೇವೆ. ಅದನ್ನು ಕೊಡುತ್ತೇವೆ.

ಉಪಾಧ್ಯಕ್ಷೆಯವರು:– ಈಗ ಚರ್ಚೆ ಮುಗಿದಿದೆ, ಒಂದು ಪ್ರಕಟಣೆ ಇದೆ.

ಪ್ರಕಟಣೆ (1)

ಉಪಾಧ್ಯಕ್ಷರು:– ಒಂದು ಪ್ರಕಟಣೆ ಇದೆ. ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ:

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 11.01.1993ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ

1. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಆಧಿ ಬೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ, 1992.
2. ಕರ್ನಾಟಕ ಧನ ವಿನಿಯೋಗ ವಿಧೇಯಕ, 1993.

(2) ಉಪಾಧ್ಯಕ್ಷರು:– ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ:

'ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 11ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 7.1.1993ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.'

1. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ 1992.
2. ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ, 1992.

(3) ಉಪಾಧ್ಯಕ್ಷರು:– ವಿಧಾನ ಸಭಾ ಸದಸ್ಯರು ಶ್ರೀ ಕೆ.ಎಸ್. ಈಶ್ವರಪ್ಪ ಅವರನ್ನು ದಿನಾಂಕ 21.12.92ರಂದು ಮಧ್ಯಾಹ್ನ 4.30 ಗಂಟೆಗೆ ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಬಂಧಿಸಿ ಅದೇ ದಿನ ಸಾಯಂಕಾಲ 5.30ಕ್ಕೆ ಬಿಡುಗಡೆ ಮಾಡಲಾಯಿತೆಂದು ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಸಾಗರ ಪೇಟೆ ಠಾಣೆ, ಸಾಗರ ಹಾಗೂ ಶ್ರೀ ಸುಭಾಷ್ ಶ್ರೀಧರ್ ಜೋಷಿಯವರನ್ನು ದಿನಾಂಕ 2.1.1993ರಂದು ಮಧ್ಯಾಹ್ನ 1.00 ಗಂಟೆಗೆ ಬಂಧಿಸಿ ಅದೇ ದಿನ ಸಾಯಂಕಾಲ 3.45 ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಕೊಲ್ಲಾಪುರ ಇವರುಗಳಿಂದ ಸಂದೇಶಬಂದಿರುತ್ತದೆ. ಇವತ್ತಿನ ಅಜೆಂಡಾ ಪ್ರಕಾರ ಇನ್ನೂ ಮೂರು ವಿಷಯಗಳನ್ನು ನಾವು ಚರ್ಚಿಸಬೇಕಾಗಿದೆ. ಕೇಂದ್ರ ಸರ್ಕಾರದ ಗೊಬ್ಬರದ ನೀತಿ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾದ ಒಂದು ವಿಷಯ. ಹಾಗೂ

ಕರ್ನಾಟಕ ರಾಜ್ಯದ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಆಶ್ರಯ ಯೋಜನೆಯಲ್ಲಿ ಆಗಿರತಕ್ಕ ಕೆಲಸಗಳನ್ನು ನಾವು ಚರ್ಚೆ ಮಾಡಬೇಕಾಗಿದೆ. ಈಗ ನಾನು ಮಾನ್ಯ ಸದಸ್ಯರುಗಳನ್ನು ಕೇಳುವುದು ಇಷ್ಟೇನೆ. ಇವೆಲ್ಲಾ ಬಹಳ ಮುಖ್ಯವಾದ ವಿಷಯಗಳು ಇವೆ, ತಾವೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ ಈ ವಿಷಯಗಳನ್ನು ನಾವು ಈವಾಗ ಚರ್ಚೆ ಮಾಡಲಿಕ್ಕೆ ಸಹಕಾರ ಕೊಡಬೇಕೆಂದು ನಾನು ತಮ್ಮನ್ನು ಕೇಳುತ್ತಿದ್ದೇನೆ. ಈಗ ಅವರೆಲ್ಲ ತಮ್ಮ ತಮ್ಮ ಸ್ಥಾನಗಳಿಗೆ ಮೊದಲು ಹೋಗಲಿ. ಈಗ ಮಾನ್ಯ ಮುಖ್ಯಮಂತ್ರಿಗಳೂ ಸಹ ತಮ್ಮ ವಿಷಯಗಳ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ, ಮಾನ್ಯ ರೆವಿನ್ಯೂ ಮಂತ್ರಿಗಳು ಸಹ ಪ್ರಸ್ತಾಪ ಮಾಡಿದ್ದಾರೆ; ತಾವೆಲ್ಲ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಕೇಳುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಶಾಸನಾತ್ಮಕವಾದ ನಿರ್ಣಯದ ಬಗ್ಗೆ ಮಂಡಿಸಬೇಕು.

ಶ್ರೀ ಹೆಚ್. ಏಕಾಂತಯ್ಯ:– ಈ ಶಾಸನಾತ್ಮಕ ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ ತಾವು ಇವತ್ತಿನ ದಿವಸ ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಗೊತ್ತು ಪಡಿಸಿದ್ದೀರಿ.

ಶ್ರೀ ಸಿ. ಬೈರೇಗೌಡ:– ಈಗಾಗಲೇ ಆರೂವರೆ ಗಂಟೆ ಆಗಿದೆ. 11 ಗಂಟೆಯಿಂದ ಕುಳಿತಿದ್ದೇವೆ. ಈ ವಿಚಾರವನ್ನು ನಾವು ನಾಳೆಗೆ ತೆಗೆದುಕೊಳ್ಳಬಹುದು.

ಶ್ರೀ ಆರ್.ವಿ. ದೇಶಪಾಂಡೆ:– ನಾಳೆ ನಮಗೆ ಆಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ನನಗೆ ಹೇಳಲಿಕ್ಕೆ ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ.

ಉಪಾಧ್ಯಕ್ಷರು:– ಹೇಳಿ, ತಾವು ಹೇಳಬೇಡಿ ಎಂದು ಹೇಳಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ನಾನೇನು ಮಾನ್ಯ ಬೈರೇಗೌಡರಿಗೆ ಅಡ್ಡಿ ಬಂದಿಲ್ಲ ಈಗ ತಾವು ಈ ದಿವಸವನ್ನು ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಗೊತ್ತು ಪಡಿಸಿದ್ದೀರಿ. ನಮ್ಮ ಸಭಾ ನಿಯಮದಂತೆ ಕೊನೆಯ ಎರಡೂವರೆ ಗಂಟೆಗಳನ್ನು ಈ ವಿಷಯದ ಚರ್ಚೆ ಬಗ್ಗೆ ಮೀಸಲಿಡಬೇಕಾಗಿದೆ. ಮೊದಲನೆಯದಾಗಿ ನಾವು ಇನ್ನೂ ಎಷ್ಟು ಗಂಟೆಗಳ ಕಾಲ ನಾವು ಕುಳಿತುಕೊಳ್ಳಬೇಕು ಎಂದು ತಾವು ತೀರ್ಮಾನ ಮಾಡಬೇಕು. ಆ ತೀರ್ಮಾನ ಮಾಡಿ ಆದಕ್ಕಿಂತ ಮುಂಚೆ ಎರಡೂವರೆ ಗಂಟೆಗಳು ಇದ್ದ ಹಾಗೆ ಈ ನಿರ್ಣಯ ಮತ್ತು ವಿಧೇಯಕಗಳನ್ನು ತಾವು ತೆಗೆದುಕೊಳ್ಳಬೇಕು, ಇದು ಒಂದು. ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ಶಾಸನಾತ್ಮಕ ನಿರ್ಣಯದ ಬಗ್ಗೆ ವಿಷಯ ಪ್ರಸ್ತಾಪ ಮಾಡಲಿಕ್ಕೆ ಇಟ್ಟಿದ್ದಾರೆ, ಅದಕ್ಕೂ ನನ್ನ ಅಪೇಕ್ಷೆ ಇದೆ. ಮೊಟ್ಟ ಮೊದಲನೆಯದಾಗಿ ಇದು ಶಾಸನಾತ್ಮಕವಾದ ನಿರ್ಣಯವೇ ಅಥವಾ ಆಫಿಷಿಯಲ್ ರೆಸಲ್ಯೂಷನ್ನೆ ಅಥವಾ ಸರ್ಕಾರೀ ನಿರ್ಣಯವೇ? ಅದು ಒಂದು ತೀರ್ಮಾನ ಆಗಬೇಕು. ಏಕೆಂದರೆ ನಮ್ಮ ಸರ್ಕಾರದಲ್ಲಿ ತರ್ಜುಮೆ ಒಂದೇ ಇದೆ. ಒಂದು ಕಡೆವರು ಹೇಳುತ್ತಾರೆ, ಆಫಿಷಿಯಲ್ ರೆಸಲ್ಯೂಷನ್ ಎಂಬ ಮಾತನ್ನು ಹೇಳುತ್ತಾರೆ, ಕನ್ನಡದಲ್ಲಿ ಬಂದಾಗ ಶಾಸನಾತ್ಮಕವಾದ ನಿರ್ಣಯ ಎಂದು ಹೇಳುತ್ತಾರೆ. ಆ ಎರಡಕ್ಕೂ ವ್ಯತ್ಯಾಸ ಇದೆ ಎಂದು ನಾನು ಭಾವಿಸಿದ್ದೇನೆ. ಹಾಗಿದ್ದರೆ ಶಾಸನಾತ್ಮಕ ನಿರ್ಣಯ ಇದ್ದರೆ ಶಾಸನಾತ್ಮಕ ನಿರ್ಣಯವನ್ನು ಯಾವ ರೀತಿ ತರಬೇಕು ಎಂಬ ಬಗ್ಗೆ ನಮಗೆ ಒಂದು ಸಂಪ್ರದಾಯ ಇದೆ, ನಿಯಮಗಳು ಇದೆ. ಮೊಟ್ಟ ಮೊದಲನೆಯದಾಗಿ ಏನು ಶಾಸನಾತ್ಮಕವಾದ ನಿರ್ಣಯಗಳನ್ನು ತಂದಿದ್ದಾರೆ, ಬೇರೆ ನಿರ್ಣಯಗಳೊಪಾದಿಯಲ್ಲಿ ಅದು ಈ ಸಭೆಯ ಮುಂದೆ ಬರಬೇಕಾಗಿತ್ತು. ತಮ್ಮ ಗಮನಕ್ಕೆ ತರುವುದು ಏನೆಂದರೆ ಈ ಶಾಸನಾತ್ಮಕ ನಿರ್ಣಯವನ್ನು, ಅದಕ್ಕೆ ಬೇಕಾದಂತಹ, ಏನು ಕಾನೂನು ರೀತ್ಯ ಪ್ರತಿಯಾಗಲಿ, ಅಥವಾ ಯಾವುದೇ ರೀತಿಯ ಸಾಹಿತ್ಯ ಇದೆ. ಆ ಯಾವುದೇ ಸಾಹಿತ್ಯವನ್ನು ಒದಗಿಸದೇ ಇಲ್ಲಿ ಸಭೆಯ ಮುಂದೆ ಇಡಲಿಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಇದರ ಬಗ್ಗೆ ತಾವು